**OS No:45/2024**
**DW:1**

(ಇಂದು ದಿನಾಂಕಃ **17-04-2025** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಶ್ರೀ ಪಿ ಕೆ ಎ ವಕೀಲರಿಂದಃ**

ನನಗೆ ದಾವಾ ಆಸ್ತಿಯ ಕುರಿತು ಮಾಹಿತಿ ಇರುತ್ತದೆ. ನನ್ನ ಮದುವೆ 28 ವರ್ಷಗಳ ಹಿಂದೆ ಆಗಿದ್ದು ಆದರೆ ನಿಖರವಾದ ವರ್ಷ ಹೇಳಲು ಬರುವುದಿಲ್ಲ. ನಾನು ಹಾಗೂ ವಾದಿ 26 ವರ್ಷಗಳಿಂದ ಪ್ರತ್ಯೇಕವಾಗಿ ಇರುತ್ತೇವೆ. ಆಗಿನಿಂದ ನಮ್ಮ ವ್ಯವಹಾರ ಪ್ರತ್ಯೇಕವಾಗಿ ಇದೆ ಎಂದರೆ ಸರಿಯಲ್ಲ. ಸರಕಾರದಿಂದ 2000 ನೇ ಇಸ್ವೀವಿಯಲ್ಲಿ ನಮ್ಮ ತಾಯಿಯ ಹೆಸರಿಗೆ ಮನೆ ಮಂಜೂರವಾಗಿರುತ್ತದೆ. ಸದರಿ ಮನೆ ಮಂಜೂರ ಆಗುವುದಕ್ಕಿಂತ ಮುಂಚೆ ನಾನು 2 ನೇ ಮದುವೆ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ಸದರಿ ಮನೆ ಮಂಜೂರವಾದ ನಂತರ ನಾವು ತಗಡಿನ ಶೇಡ್ ಹಾಕಿಕೊಂಡು ಎಲ್ಲರೂ ವಾಸ ಇದ್ದವು ಎಂದರೆ ಸರಿ. ನಮ್ಮ ಕುಂಟುಂಬಕ್ಕೆ ಸಂಭಂದಿಸಿ ಒಟ್ಟು ಎಷ್ಟು ಪಿತ್ರಾರ್ಜಿತ ಆಸ್ತಿಗಳು ಇದ್ದವು ಎಂದು ನನಗೆ ಹೇಳಲು ಆಗುವುದಿಲ್ಲ. ಸರಕಾರದಿಂದ ಮಂಜೂರವಾದ ಆಸ್ತಿಯ ಸಂಖ್ಯೆ 78. ದಾವಾದ ಆಸ್ತಿಗಳ ಸಂಖ್ಯೆ ನನಗೆ ಹೇಳಲು ಬರುವುದಿಲ್ಲ. ದಾವಾದ ಆಸ್ತಿಗಳಲ್ಲಿ ಇಲ್ಲಿಯವರೆಗೆ ಪಾಲು ವಿಭಾಗ ಆಗಿರುವುದಿಲ್ಲ ಎಂದರೆ ಸರಿ. ನಮ್ಮ ಒಟ್ಟು ಕುಟುಂಬಕ್ಕೆ ಸಂಭಂದಿಸಿ ½ ಎಕರೆ ಜಮೀನು ಇರುತ್ತದೆ. ಸಾಕ್ಷಿ ಮುಂದುವರೆದು ನಾನೇ ದುಡಿದು ವಾದಿಗೆ ಶಿಕ್ಷಣ ಕೊಡಿಸಿರುತ್ತೇನೆ ಎಂದು ನುಡಿದಿರುತ್ತಾರೆ. ನನ್ನ ಹಾಗೂ ವಾದಿಯ ವಯಸ್ಸು ನಿಖರವಾಗಿ ಹೇಳಲು ಬರುವುದಿಲ್ಲ. ನಾನು 1998 ರಲ್ಲಿ 2 ನೇ ಮದುವೆ ಆದ ನಂತರ 3-4 ವರ್ಷಗಳ ಕಾಲ ಒಟ್ಟಿಗೆ ಇದ್ದು ನಂತರ ನಾನು ಹಾಗೂ ವಾದಿ ಪ್ರತ್ಯೇಕವಾಗಿ ವಾಸ ಇದ್ದೆವು.

2. ನನ್ನ ತಾಯಿ 2012 ರಲ್ಲಿ ನನ್ನ ಹೆಸರಿನಲ್ಲಿ ಮೃತ್ಯೂ ಪತ್ರ ಮಾಡಿರುತ್ತಾರೆ. ನನ್ನ 2 ನೇ ಮದುವೆಯಾದ 3 ವರ್ಷಗಳ ನಂತರ ವಾದಿ 2 ಎಕರೆ ಜಮೀನನ್ನು ನಮ್ಮ ಕೊಡು ಕುಟುಂಬದ ಆದಾಯದಿಂದ ಖರೀದಿಸಿರುತ್ತಾರೆ. ಸದರಿ ಜಮೀನನ್ನು ಖರೀದಿಸಿ ಈಗ 18 ವರ್ಷ ಆಗಿರುತ್ತದೆ. ಜಮೀನನ್ನು ಖರೀದಿಸಿದ 2 ವರ್ಷಗಳ ನಂತರ ವಾದಿ ಟಮ್ ಟಮ್ ವಾಹನವನ್ನು ಖರೀದಿಸಿರುತ್ತಾರೆ. ನನಗೆ ಒಬ್ಬ ಮಗ ಇರುತ್ತಾನೆ. ನನ್ನ ಮದುವೆಯಾದ 2 ವರ್ಷಗಳ ನಂತರ ವಾದಿಯ ಮದುವೆ ಆಗಿರುತ್ತದೆ. ವಾದಿಗೆ ಇಬ್ಬರೂ ಗಂಡು ಮಕ್ಕಳು ಇರುತ್ತಾರೆ. ಸದರಿಯವರು ಇಬ್ಬರೂ ಅಟೋ ಚಲಾಯಿಸಿರುತ್ತಾರೆ. ನನ್ನ ತಾಯಿ 2015 ರಲ್ಲಿ ಮರಣ ಹೊಂದಿರುತ್ತಾರೆ. ಸದರಿಯವರು ನಮ್ಮ ಪ್ಲಾಟ್‌ನಲ್ಲಿ ಮರಣ ಹೊಂದಿರುತ್ತಾರೆ. ಸಾಕ್ಷಿ ಮುಂದುವರೆದ ಸದರಿಯವರನ್ನು ನಾನೇ ಜೋಪಾನ ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ.

ನನ್ನ ತಾಯಿ ವಾದಿಯ ಮನೆಯಲ್ಲಿ ಯಾವ ಕಾಲಕ್ಕೂ ಸಹ ವಾಸವಿರಲಿಲ್ಲ. ಸದರಿಯವರು ಅನಾರೋಗ್ಯವಾದಗ ನಾನೇ ಚಿಕಿತ್ಸೆ ಕೊಡಿಸಿರುತ್ತೇನೆ. ನನ್ನ ತಾಯಿ ಮೃತ ಪಡುವವರೆಗೆ ವಾದಿಯ ಮನೆಯಲ್ಲಿ ವಾಸವಿದ್ದು ವಾದಿಯೆ ಸದರಿಯವರ ಜೋಪಾನ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ½ ಎಕರೆ ಜಮೀನಿನಲ್ಲಿ ಎಷ್ಟು ಆದಾಯ ಬರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಜಮೀನನ್ನು ನನ್ನ ತಾಯಿ 2015 ರಲ್ಲಿ ಮೃತಪಟ್ಟ ನಂತರದಿಂದ ನಾನೆ ಸಾಗುವಳಿ ಮಾಡುತ್ತಿದ್ದೇನೆ. 2015 ಕ್ಕಿಂತ ಮುಂಚೆ ನಾನು ಹಾಗೂ ವಾದಿ ಸಾಮೂಹಿಕವಾಗಿ ಸಾಗುವಳಿ ಮಾಡುತ್ತಿದ್ದೇವು. ಸದರಿ ಜಮೀನಿನ ಸರ್ವೆ ನಂಬರ ಹೇಳಲು ಬರುವುದಿಲ್ಲ. ಸದರಿ ಜಮೀನು ಅಣ್ಣಿಗೇರಿಯಲ್ಲಿ ಇರುತ್ತದೆ. ಹಳ್ಳಿಕೇರಿಯ ಜಮೀನನ್ನು ವಾದಿಯ ಹೆಸರಿಗೆ ಮಾಡುವುದಾಗಿ ತಿಳಿಸಿ, ದಾವಾ ಆಸ್ತಿ ಕ್ರಮ ಸಂಖ್ಯೆ 3 ನ್ನು ನನ್ನ ಹೆಸರಿಗೆ ಮೃತ್ಯೂ ಪತ್ರ ಮಾಡಿರುತ್ತಾರೆ. ಹಳ್ಳಿಕೇರಿಯ 2 ಎಕರೆ ಜಮೀನು ಹಾಗೂ ಟಮ್ ಟಮ್ ವಾಹನ ವಾದಿಯ ಹೆಸರಿನಲ್ಲಿ ಇರುತ್ತದೆ. ವಾದಿ ಈಗ ಅಣ್ಣಿಗೇರಿಯ ನನ್ನ ತಾಯಿಯ ತವರು ಮನೆಯಲ್ಲಿ ವಾಸವಿದ್ದಾನೆ. ದಾವಾ ಆಸ್ತಿ ಕ್ರಮ ಸಂಖ್ಯೆ 1 ಮತ್ತು 2 ರ ತೆರಿಗೆಯನ್ನು ವಾದಿ ಹಾಗೂ ಕ್ರಮ ಸಂಖ್ಯೆ 3 ರ ತೆರಿಗೆಯನ್ನು ನಾನು ಪಾವತಿಸುತ್ತಿದ್ದೇನೆ. ದಾವಾ ಆಸ್ತಿ ಕ್ರಮ ಸಂಖ್ಯೆ 3 ರಲ್ಲಿ ನಾನು ಹಾಗೂ ವಾದಿ ಸೇರಿ ಮನೆ ಕಟ್ಟಿರುತ್ತೇವೆ ಎಂದರೆ ಸಾಕ್ಷಿಯು ನಾನು ಮಾತ್ರ ಕಟ್ಟಿಸಿರುತ್ತೇನೆ ಎಂದು ನುಡಿದಿರುತ್ತೇನೆ. ಸದರಿ ಮನೆ ಕಟ್ಟಲು ವಾದಿ ಯಾವುದೇ ರೀತಿಯ ಹಣ ಪಾವತಿಸಿರುವುದಿಲ್ಲ. ನಾನು ಹಾಗೂ ವಾದಿ ಕಳೆದ 26 ವರ್ಷಗಳಿಂದ ಪ್ರತ್ಯೇಕವಾಗಿ ಇದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಕ್ರಮ ಸಂಖ್ಯೆ 3 ರಲ್ಲಿ ನಾನು ಮಾತ್ರ ಮನೆ ಕಟ್ಟಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸಾಕ್ಷಿಯ ಮುಂದುವರೆದು ನನ್ನ ತಾಯಿ ಮೃತ ಪಟ್ಟ ನಂತರ 2015 ರಲ್ಲಿ ಮನೆ ಕಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ. 2010 ರಲ್ಲಿ ಹಳ್ಳಿಕೇರಿಯ ಜಮೀನು ಖರೀದಿಯಾಗಿದ್ದು 2003 ರಲ್ಲಿ ಎಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸಾಕ್ಷಿಯು 2003 ರಲ್ಲಿ ಅಲ್ಪ ಹಣ ಪಾವತಿಸಿದ್ದು ಉಳಿದ ಹಣವನ್ನು 2010 ರಲ್ಲಿ ಪಾವತಿಸಿ ಖರೀದಿ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. 2003 ರಲ್ಲಿ ಎಷ್ಟು ಹಣ ಪಾವತಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಖರೀದಿಗೆ ನಾನು ಸಹ ಹಣ ಪಾವತಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2012 ರಲ್ಲಿ ನಾನು ನನ್ನ ತಾಯಿಯನ್ನು ಹೆದರಿಸಿ ವಾದಿಗೆ ಗೊತ್ತಾಗದ ಹಾಗೆ ಮೃತ್ಯೂ ಪತ್ರ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ವಾದಿಯ ಸುಮಕ್ಷಮ ಮೃತ್ಯೂ ಪತ್ರ ಮಾಡಿಸಲಾಗಿರುತ್ತದೆ ಎಂದು ನುಡಿದಿರುತ್ತಾರೆ. ½ ಎಕರೆ ಜಮೀನು ನಮ್ಮ ಹಿರಿಯರ ಹೆಸರಿನಲ್ಲಿ ಇರುತ್ತವೆ . 1 ಎಕರೆ ಜಮೀನಿನಲ್ಲಿ ನಾವು ಮೂರು ಜನ ಸಾಗುವಳಿ ಮಾಡುತ್ತಿದ್ದೇವೆ. 2010 ರಿಂದ ನಾನು ವಾದಿಗೆ ಯಾವುದೇ ರೀತಿ ಹಣ ಪಾವತಿಸಿರುವುದಿಲ್ಲ ಎಂದರೆ ಸಾಕ್ಷಿಯು ವಾದಿ

ಆಗಾಗ ನನ್ನ ಬಳಿ ಹಣ ಪಡೆದುಕೊಂಡಿರುತ್ತಾನೆ ಎಂದು ನುಡಿದಿರುತ್ತಾರೆ. ವಾದಿ ಹಾಗೂ ಆತನ ಮಕ್ಕಳು ಸೇರಿ ದುಡಿದು 2 ಎಕರೆ ಜಮೀನು ಹಾಗೂ ಟಮ್ ಟಮ್ ವಾಹನ ಖರೀದಿಸಿರುತ್ತಾರೆ ಎಂದರೆ ಸಾಕ್ಷಿಯು ನಾನು ಸಹ ಹಣ ಪಾವತಿಸಿರುತ್ತೇನೆ ಎಂದು ನುಡಿದಿರುತ್ತಾರೆ. ವಾದಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**ಸಹಿ/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**

**ನವಲಗುಂದ.**